# ಕ್ಷೀರ ಭಾಗ್ಯ





## ಕ್ಷೀರಭಾಗ್ಯ

### ಪೌಷ್ಠಿಕ ಮಕ್ಕಳು

ಶಾಲಾ ಮಕ್ಕಳಿಗೆ ಬಿಸಿಹಾಲು ಪೂರೈಸುವ ಸರ್ಕಾರದ ಮಹತ್ವಾಕಾಂಕ್ಷೆಯ 'ಕ್ಷೀರಭಾಗ್ಯ' ಯೋಜನೆ 2013ರ ಆಗಸ್ಟ್ ತಿಂಗಳಿನಿಂದ ರಾಜ್ಯದಾದ್ಯಂತ ಅನುಷ್ಠಾನಗೊಂಡಿದೆ. ಮಕ್ಕಳಲ್ಲಿ ಪೌಷ್ಠಿಕತೆ ಹೆಚ್ಚಿಸುವ ಸದುದ್ದೇಶದಿಂದ ಸರ್ಕಾರ ಜಾರಿಗೆ ತಂದ ಈ ಯೋಜನೆಯಿಂದ ಅಂಗನವಾಡಿ ಮಕ್ಕಳು ಸೇರಿದಂತೆ 1 ರಿಂದ 10ನೇ ತರಗತಿವರೆಗಿನ ಒಂದು ಕೋಟಿಗೂ ಅಧಿಕ ಮಕ್ಕಳಿಗೆ ಪ್ರಯೋಜನವಾಗುತ್ತಿದೆ.



**ಆ**ರೋಗ್ಯವಂತ ಮಕ್ಕಳು ನಮ್ಮ ದೇಶದ ಭವಿಷ್ಯದ ಆಸ್ತಿ ಎನ್ನುವ ಸದುದ್ದೇಶದಿಂದ ಸರ್ಕಾರ 'ಕ್ಷೀರ ಭಾಗ್ಯ' ಯೋಜನೆಯಡಿ ಅಂಗನವಾಡಿ ಮಕ್ಕಳು ಮತ್ತು 1 ರಿಂದ 10ನೇ ತರಗತಿಯ ಮಕ್ಕಳಿಗೆ ಉಚಿತವಾಗಿ ವಾರದಲ್ಲಿ ಮೂರು ದಿನ ಹಾಲನ್ನು ನೀಡುತ್ತಿದೆ. ಈ ಯೋಜನೆಯಿಂದಾಗಿ ಸರ್ಕಾರಿ ಶಾಲೆಯ ಸುಮಾರು 1.04 ಕೋಟಿ ಮಕ್ಕಳು ಸೋಮವಾರ, ಬುಧವಾರ ಮತ್ತು ಶುಕ್ರವಾರಗಳಂದು ತಲಾ 150 ಎಂ.ಎಲ್ ಹಾಲನ್ನು ಪಡೆದುಕೊಳ್ಳಲಿದ್ದಾರೆ.

ರಾಜ್ಯದಾದ್ಯಂತ ಇರುವ 51 ಸಾವಿರ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ 65 ಲಕ್ಷ ಮಕ್ಕಳು ಮತ್ತು 64 ಸಾವಿರ ಅಂಗನವಾಡಿಗಳಲ್ಲಿರುವ 39 ಲಕ್ಷ ಮಕ್ಕಳಿಗೆ ಬಿಸಿ ಹಾಲನ್ನು ನೀಡಲಾಗುತ್ತಿದೆ. ಅಂಗನವಾಡಿಯ ಮಕ್ಕಳ ಆರೋಗ್ಯದ ದೃಷ್ಟಿಯಿಂದ ಅವರುಗಳಿಗೆ ಕೆನೆ ರಹಿತ ಹಾಲನ್ನು ನೀಡಿದರೆ, 1 ರಿಂದ 10ನೇ ತರಗತಿ ಮಕ್ಕಳಿಗೆ ಕೆನೆ ಭರಿತ ಹಾಲನ್ನು ನೀಡಲಾಗುತ್ತಿದೆ.

| 1 ರಿಂದ 10ನೇ ತರಗತಿ ಮಕ್ಕಳಿಗೆ | |
|---|---|
| ಶಾಲೆಗಳ ಸಂಖ್ಯೆ | 51 ಸಾವಿರ |
| ಮಕ್ಕಳ ಸಂಖ್ಯೆ | 65 ಲಕ್ಷ |
| ಕೆನೆ ಭರಿತ ಹಾಲಿನ ಪುಡಿ | 18 ಗ್ರಾಂ/ ಪ್ರತಿ ವಿದ್ಯಾರ್ಥಿಗೆ |
| ಬೇಕಾಗುವ ಹಾಲಿನ ಪುಡಿ | 1 ದಿನಕ್ಕೆ 1.17 ಲಕ್ಷ ಕೆ.ಜಿ (117 ಟನ್) |
| 1 ದಿನಕ್ಕೆ ತಗಲುವ ವೆಚ್ಚ | ಪ್ರತಿ ವಿದ್ಯಾರ್ಥಿಗೆ ತಲಾ 4.64 ರೂ. |
| ಯೋಜನೆಯ ಒಟ್ಟು ವೆಚ್ಚ | 313 ಕೋಟಿ ರೂ. |

| ಅಂಗನವಾಡಿ ಮಕ್ಕಳಿಗೆ | |
|---|---|
| ಅಂಗನವಾಡಿಗಳ ಸಂಖ್ಯೆ | 64 ಸಾವಿರ |
| ಮಕ್ಕಳ ಸಂಖ್ಯೆ | 39 ಲಕ್ಷ |
| ಕೆನೆ ರಹಿತ ಹಾಲಿನ ಪುಡಿ | 15 ಗ್ರಾಂ/ ಪ್ರತಿ ಮಗುವಿಗೆ |
| ಬೇಕಾಗುವ ಹಾಲಿನ ಪುಡಿ | 1 ದಿನಕ್ಕೆ 58,500 ಕೆ.ಜಿ |
| 1 ದಿನಕ್ಕೆ ತಗಲುವ ವೆಚ್ಚ | ಪ್ರತಿ ಮಗುವಿಗೆ ತಲಾ 2.85 ರೂ. |
| ಯೋಜನೆಯ ಒಟ್ಟು ವೆಚ್ಚ | 115 ಕೋಟಿ ರೂ. |